– ಹಾಚ್‌ಪಾಚ್ ಅಂತೀವಲ್ಲ, ಹಾಗೆ ತೇಪೆ ಹಾಕಿಕೊಂಡು ಮಾಡಿರುವ, ಟೆಕ್ನಿಕಲಿ ಇನ್ ಕಾಂಪಿಟೆಂಟ್ ಆಗಿರುವ ಸಿನಿಮಾಗಳು. 'ಅರಣ್ಯಕಾಂಡಂ', 'ಪರಿಯೆರುಮ್ ಪೆರುಮಾಳ್', 'ಸೂಪರ್ ಡಿಲಕ್ಸ್' ರೀತಿಯ ತಮಿಳು ಸಿನಿಮಾಗಳ ಸ್ಪರ್ಧಾತ್ಮಕತೆ ಹಾಗೂ ಶೋಧ ಅಚ್ಚರಿಹುಟ್ಟಿಸುವಂತಿದೆ. ಅವುಗಳಿಗೆ ಹೋಲಿಸಿದರೆ ಕನ್ನಡ ಸಿನಿಮಾ ಎಲ್ಲಿಯೂ ನಿಲ್ಲಲಿಕ್ಕೆ ಸಾಧ್ಯವಿಲ್ಲ ಎನ್ನಿಸುತ್ತದೆ.

ಇನ್ನು ಕನ್ನಡದ ಮುಖ್ಯವಾಹಿನಿಯಲ್ಲದ ಸಿನಿಮಾಗಳಿಗೂ ಸಮಸ್ಯೆಯಿದೆ. ಇರಾನ್, ಲ್ಯಾಟಿನ್ ಅಮೆರಿಕ, ಟರ್ಕಿ, ದಕ್ಷಿಣ ಆಫ್ರಿಕಾದ ಸಿನಿಮಾಗಳು ತಮ್ಮತನಕ್ಕೆ ಹಂಬಲಿಸುವಂತೆ ನಮ್ಮ ಸಿನಿಮಾಗಳಲ್ಲಿ ಅಸ್ಮಿತೆಯ ಹುಡುಕಾಟ ಇಲ್ಲ. ನಮ್ಮ ನುಡಿಗಟ್ಟಿಲ್ಲ, ನೇಟಿವಿಟಿ ಇಲ್ಲ. ಯಾವುದೇ ರೀತಿಯಲ್ಲಿ ನಮ್ಮ ಅಸ್ಮಿತೆಯನ್ನು ಶೋಧಿಸುವ, ಕಟ್ಟುವ ಪ್ರಯತ್ನ ನಮ್ಮಲ್ಲಿ ಆಗುತ್ತಿದೆ ಎನ್ನಿಸುತ್ತಿಲ್ಲ. ಈಗ ಫೆಸ್ಟಿವಲ್‌ಗೆ ಹೋಗುವುದು ಇದೆಯಲ್ಲ, ಅಲ್ಲಿನ ಸಿನಿಮಾಗಳನ್ನು ನೋಡುವ ಮೂಲಕ – ಪ್ರಪಂಚದಲ್ಲಿ ಏನು ನಡೀತಿದೆ, ಹೇಗೆ ಮಾಡಿದರೆ ಸಿನಿಮಾ ಓಡುತ್ತೆ, ಬೇರೆ ಕಡೆ ನಡೆಯುತ್ತಿರುವ ನುಡಿಗಟ್ಟು ಯಾವುದು ಎನ್ನುವುದನ್ನು ನಮ್ಮವರು ಅನುಕರಣೆ ಮಾಡಲಿಕ್ಕೆ ಪ್ರಯತ್ನಿಸುತ್ತಾರೆಯೇ ಹೊರತು – 'ಇಲ್ಲಿ ನೋಡಿ, ಹೊಸತೊಂದು ಸಿನಿಮಾ ಹುಟ್ಟುತ್ತಿದೆ' ಎಂದು ಇಡೀ ಜಗತ್ತಿಗೆ ಕೂಗಿ ಹೇಳುವಂತಹ ಸಿನಿಮ್ಯಾಟಿಕ್ ಈಡಿಯಂ ಅನ್ನು ನಾವು ಹುಡುಕುತ್ತಿಲ್ಲ, ಹುಟ್ಟುಹಾಕುತ್ತಿಲ್ಲ. ಇದು ಬಹಳ ನಿರಾಶೆಯ ಸಂಗತಿ. ಥಾಯ್ಲೆಂಡ್‌ನಂತಹ ಪುಟ್ಟ ದೇಶಗಳಿಂದ ಬರುವ ಸಿನಿಮಾಗಳು ಕೂಡ ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತವೆ. ■

### ಲಾಟರಿ: ಮುಂದೇನು?

ಸಂಖ್ಯಾ ದೃಷ್ಟಿಯಿಂದ ಕನ್ನಡ ಚಿತ್ರರಂಗ ಮುಂಚೂಣಿಯಲ್ಲಿದೆ. ಈಗ ಗುಣಮಟ್ಟದ ಬಗ್ಗೆ ಗಮನಹರಿಸುವ ಸಿನಿಮಾ. ಗುಣಮಟ್ಟದ ಸಿನಿಮಾವೆಂದರೆ ಅದು ತಾಂತ್ರಿಕ ಉತ್ತಮಿಕೆಯಷ್ಟೇ ಅಲ್ಲ. ಹೊಸ ಬಗೆಯ ಕಥೆಗಳು ಹಾಗೂ ಆ ಕಥೆಗಳನ್ನು ಬಿಂಬಗಳನ್ನಾಗಿ ಕಟ್ಟುವಲ್ಲಿನ ಕಸುಬುಗಾರಿಕೆಗೆ ಒತ್ತು ನೀಡಬೇಕಾದುದು ಈ ಹೊತ್ತಿನ ಅವಶ್ಯಕತೆ. ಹೀಗೆ ರೂಪುಗೊಳ್ಳುವ ಸಿನಿಮಾ ತನ್ನ ನೆಲ ಮತ್ತು ನುಡಿಗಟ್ಟನ್ನು ಯಾವ ರೀತಿ ಒಳಗೊಂಡಿದೆ ಎನ್ನುವ ವಿವೇಕವೂ ಅಗತ್ಯ.

ಲಾಟರಿಯೋ ಮತ್ತೊಂದೋ ಕನ್ನಡ ಸಿನಿಮಾಗಳಿಗೆ ದಾಖಲೆ ಪ್ರಮಾಣದಲ್ಲಿ ರಾಷ್ಟ್ರಪ್ರಶಸ್ತಿಗಳು ದೊರೆತಿರುವುದಂತೂ ನಿಜ. ಈ ಪ್ರಶಸ್ತಿಗಳು ನಮ್ಮ ನಾಳಿನ ಸಿನಿಮಾಗಳ ಗುಣಮಟ್ಟ ಹೆಚ್ಚಲಿಕ್ಕೆ ಪ್ರೇರಣೆ ಒದಗಿಸಬೇಕು. ಮುಂದಿನ ವರ್ಷ ಮತ್ತೆ ಒಂದೆರಡು ಪ್ರಶಸ್ತಿಗಳಿಗೆ ಪರದಾಡುವ ಸ್ಥಿತಿ ಚಿತ್ರರಂಗಕ್ಕೆ ಬರಬಾರದು. ■



ಪಿ. ಶೇಷಾದ್ರಿ ನಿರ್ದೇಶನದ **ಮೂಕಜ್ಜಿಯ ಕನಸುಗಳು** ಈ ವರ್ಷ ನ್ಯಾಷನಲ್ ಆರ್ಕೈವ್ಸ್‌ಗೆ ಆಯ್ಕೆಯಾಗಿದೆ

## ರಸಭಿಜ್ಞತೆ ಕಡಿಮೆಯಾಗಿದೆ

**-ಪಿ. ಶೇಷಾದ್ರಿ**, ನಿರ್ದೇಶಕ

- **ಕನ್ನಡದ ಕಲಾತ್ಮಕ ಸಿನಿಮಾಗಳ ಪ್ರಮುಖ ಸಮಸ್ಯೆಯೇನು?**

ನಮ್ಮಲ್ಲಿನ ಕಲಾತ್ಮಕ ಸಿನಿಮಾಗಳ ನಿರ್ಮಾತೃಗಳು ಇನ್ನೂ 20–30 ಲಕ್ಷ ರೂಪಾಯಿಗಳಲ್ಲೇ ಸಿನಿಮಾ ಮಾಡಬೇಕೆನ್ನುವ ಗುಂಗಿನಲ್ಲಿದ್ದಾರೆ. ಕಡಿಮೆ ಬಜೆಟ್‌ನಲ್ಲಿ ಸಿನಿಮಾ ಮಾಡಬಾರದೆಂದಲ್ಲ; ಅಂಥ ಸಿನಿಮಾಗಳನ್ನು ನಾನು ಕೂಡ ಮಾಡಿದ್ದೇನೆ. ಆದರೆ, ಸಿನಿಮಾದ ಬಜೆಟ್ ಅನ್ನು ನಿರ್ಧರಿಸಬೇಕಾದುದು ಚಿತ್ರದ ಕಥೆ ಹಾಗೂ ಅದರ ಏಸ್ತೆಟಿಕ್ಸ್.



- **ಕನ್ನಡದ ಮುಖ್ಯವಾಹಿನಿ ಚಿತ್ರಗಳ ಮುಖ್ಯ ಸಮಸ್ಯೆಯೇನು?**

ಕನ್ನಡದ ಮುಖ್ಯವಾಹಿನಿಯ ಸಿನಿಮಾಗಳು ತಂತ್ರಜ್ಞಾನಕ್ಕೆ ನೀಡುತ್ತಿರುವ ಪ್ರಾಮುಖ್ಯವನ್ನು ವಸ್ತು ಮತ್ತು ಪ್ರಾದೇಶಿಕತೆಗೆ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮರಾಠಿಯ ಹಿರಿಯ ದಿಗ್ದರ್ಶಕ ಮೋಹನ್ ಆಗಾಶೆ ಅವರ ಮಾತು ನೆನಪಿಗೆ ಬರುತ್ತದೆ. 'ಸಿನಿಮಾದಲ್ಲಿನ ಮಾತುಗಳನ್ನು ತೆಗೆದು ತೋರಿಸಿದರೆ ಯಾವುದು ಮಲಯಾಳಂ, ಯಾವುದು ತೆಲುಗು ಅಥವಾ ಯಾವುದು ತಮಿಳು ಸಿನಿಮಾ ಎಂದು ಗುರ್ತಿಸಬಲ್ಲೆ. ಆದರೆ, ಕನ್ನಡ ಸಿನಿಮಾ ಗುರ್ತಿಸುವುದು ಕಷ್ಟ'.

- **ರಾಷ್ಟ್ರಪ್ರಶಸ್ತಿಗಳು ತಮ್ಮ ಮೂಲ ಉದ್ದೇಶದಿಂದ ದೂರ ಸರಿಯುತ್ತಿವೆಯೇ?**

ಹೌದು, ರಾಷ್ಟ್ರೀಯ ಪ್ರಶಸ್ತಿಗಳು ತಮ್ಮ ಮೂಲ ಉದ್ದೇಶದಿಂದ ದೂರ ಸರಿಯುತ್ತಿವೆಯೇನೋ ಎಂದು ಈಚಿನ ವರ್ಷಗಳಲ್ಲಿ ಬಲವಾಗಿ ಅನ್ನಿಸುತ್ತಿದೆ. 'ಸೌಂದರ್ಯಪ್ರಜ್ಞೆ, ತಾಂತ್ರಿಕ ಔನ್ನತ್ಯ, ಸಾಮಾಜಿಕ ಪ್ರಸ್ತುತತೆ ಹಾಗೂ ದೇಶದ ಬಹುಸಂಸ್ಕೃತಿಗಳನ್ನು ದೃಶ್ಯಮಾಧ್ಯಮದ ಪ್ರಕಾರದಲ್ಲಿ ಅರ್ಥೈಸುವ ಹಾಗೂ ಸೃಜನಶೀಲವಾಗಿ ಸ್ಪಂದಿಸುವುದು, ದೇಶದ ಏಕತೆಯನ್ನು ಉತ್ತೇಜಿಸುವುದು' – ರಾಷ್ಟ್ರಪ್ರಶಸ್ತಿಗಳನ್ನು ನೀಡುವ ನಿಟ್ಟಿನಲ್ಲಿ ಪ್ರಮುಖವಾಗಿ ಪರಿಗಣಿಸಬೇಕಾದ ಸಂಗತಿಗಳಿವು. ಈಚಿನ ವರ್ಷಗಳಲ್ಲಿ ಪ್ರಶಸ್ತಿ ಪಡೆದಿರುವ ಸಿನಿಮಾಗಳಲ್ಲಿ ಈ ಅಂಶಗಳು ಎಷ್ಟರಮಟ್ಟಿಗೆ ಕಾಣಿಸುತ್ತಿವೆ ಎನ್ನುವುದನ್ನು ಪರಿಶೀಲಿಸಿದರೆ, ಇಡೀ ಪ್ರಶಸ್ತಿ ಪ್ರಕ್ರಿಯೆ ಸರಿಯಾದ ರೀತಿಯಲ್ಲಿ ನಡೆಯದಿರುವುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಸ್ವರ್ಣಕಮಲ ಪುರಸ್ಕಾರಕ್ಕೆ ಪಾತ್ರವಾದ 'ಬಾಹುಬಲಿ' ಚಿತ್ರದಲ್ಲಿ ಪ್ರಶಸ್ತಿಯ ಮಾನದಂಡಗಳನ್ನು ಹೇಗೆ ಕಾಣುವುದು?

ಸಿನಿಮಾ ಪ್ರಶಸ್ತಿಗಳಲ್ಲಿ ಮಾತ್ರವಲ್ಲ, ಎಲ್ಲ ಕ್ಷೇತ್ರಗಳಲ್ಲೂ ರಸಭಿಜ್ಞತೆ ಎನ್ನುವುದು ಕಡಿಮೆಯಾಗಿದೆ ಎನ್ನಿಸುತ್ತಿದೆ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in